ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	::	755
ಸದಸ್ಯರ ಹೆಸರು	::	ಶ್ರೀ ಹೆಚ್.ಎಂ. ರಮೇಶಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	::	25.09.2020
ಉತ್ತರಿಸುವ ಸಚಿವರು	::	ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು

ಕ್ರಸಂ	ಪ್ರಶ್ನೆಗಳು	ಉತ್ತರಗಳು
(ಅ)	2005 ರಲ್ಲಿ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಪ್ರಾರಂಭವಾಗಿದ್ದರೂ ಸಹ ಬೋರ್ಡ್ ಆಫ್ ಮ್ಯಾನ್ಯೇಜಮೆಂಟ್‌ನಲ್ಲಿ ಮಾನ್ಯ ಶಾಸಕರುಗಳನ್ನು ನಾಮ ನಿರ್ದೇಶನ ಮಾಡಲು ಅವಕಾಶ ಕಲ್ಪಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಬಂದಿರುತ್ತದೆ.
(ಆ)	ಬಂದಿದ್ದಲ್ಲಿ, ಮಾನ್ಯ ಶಾಸಕರುಗಳನ್ನು ನಾಮ ನಿರ್ದೇಶನ ಮಾಡುವ ಬಗ್ಗೆ ಸರ್ಕಾರದ ನಿಲುವೇನು;	ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಬೋರ್ಡ್ ಆಫ್ ಮ್ಯಾನೇಜಮೆಂಟ್‌ಗೆ ಮಾನ್ಯ ಶಾಸಕರುಗಳನ್ನು ನಾಮ ನಿರ್ದೇಶನ ಮಾಡಲು ವಿಶ್ವವಿದ್ಯಾಲಯದ ಅಧಿನಿಯಮದಲ್ಲಿ ಅವಕಾಶ ಕಲ್ಪಿಸಿ ಕೊಂಡಿರುವುದಿಲ್ಲ.
(ಇ)	ಮಂಗಳೂರು ಮೀನುಗಾರಿಕೆ ಮಹಾವಿದ್ಯಾಲಯದಲ್ಲಿ AICRP ಯೋಜನೆಯಡಿ ಅನುಷ್ಠಾನದಲ್ಲಿ ಆಗಿರುವ ಲೋಪದೋಷಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;	ಐಸಿಎಆರ್-ಎಐಸಿಆರ್‌ಪಿ ಹಾಗೂ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯದ ನಡುವೆ ಅನುಮೋದನೆಗೊಂಡಿರುವ ಒಡಂಬಡಿಕೆಯ ಪ್ರಕಾರವೇ ಮಂಗಳೂರು ಮೀನುಗಾರಿಕೆ ಮಹಾ ವಿದ್ಯಾಲಯದಲ್ಲಿ AICRP ಯೋಜನೆಯು ಕಾರ್ಯನಿರ್ವಹಿಸುತ್ತಿದ್ದು ಅನುಷ್ಠಾನದಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದಿರುವುದಿಲ್ಲ.
(ಈ)	ಲೋಕಸಭೆ ಚುನಾವಣೆಯ ಮಾದರಿ ನೀತಿ ಸಂಹಿತೆ ಇದ್ದಾಗಲೂ ಸಹ ಪತ್ರಿಕೆ ಪ್ರಕಟಣೆ ನೀಡದೇ 2019 ರಲ್ಲಿ AICRP ಯೋಜನೆಯಡಿ ನಿಯಮ ಬಾಹಿರವಾಗಿ ವಿಜ್ಞಾನಿ ತಾಂತ್ರಿಕ ಸಿಬ್ಬಂದಿ ನೇಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೇಂದ್ರ ಸರ್ಕಾರವು ಮಾರ್ಚ್ 2019ರಲ್ಲಿ ಹೊರಡಿಸಲಾದ ಮಾದರಿ ನೀತಿ ಸಂಹಿತೆ ಮಾರ್ಗಸೂಚಿಗಳ ಪ್ರಕಾರ ಶಾಸನಬದ್ಧ ಸಂಸ್ಥೆಗಳಲ್ಲಿ ಸಿಬ್ಬಂದಿ ನೇಮಕಾತಿಗೆ ಸಡಿಲಿಕೆಯನ್ನು ನೀಡಲಾಗಿರುತ್ತದೆ ಅದರ ಪ್ರಕಾರವಾಗಿಯೇ ಯೋಜನೆಯಡಿಯಲ್ಲಿ ತಾತ್ಕಾಲಿಕವಾಗಿ ವಿಜ್ಞಾನಿ: ತಾಂತ್ರಿಕ ಸಿಬ್ಬಂದಿ ನೇಮಕವಾಗಿರುತ್ತದೆ, ಅಲ್ಲದೇ ನೇಮಕಾತಿಯ ಆದೇಶವನ್ನು ಮಾದರಿ ನೀತಿ ಸಂಹಿತೆ ಮುಕ್ತಾಯಗೊಂಡ ನಂತರ ನೀಡಲಾಗಿದೆ. ಭಾರತೀಯ ಕೃಷಿ ಅನುಸಂಧಾನ ಸಂಸ್ಥೆಯ ಅಖಿಲ ಭಾರತ ಸಹ-ಸಂಘಟಿತ ಸಂಶೋಧನಾ ಯೋಜನೆ (ಕೊಯ್ಲುನೋತ್ತರ ಅಭಿಯಂತರು ಮತ್ತು ತಂತ್ರಜ್ಞಾನ ವಿಭಾಗ) ಯೋಜನೆಯು 2010 ರಿಂದಲೂ ನಿರಂತರ ಸೂತ್ರದಲ್ಲಿ ನಡೆದು ಕೊಂಡು ಬರುತ್ತಿರುವುದರಿಂದ

		ಕೇಂದ್ರ ಸರ್ಕಾರದ ಅಂಗ ಸಂಸ್ಥೆಯಾಗಿರುವ ಭಾರತೀಯ ಕೃಷಿ ಅನುಸಂಧಾನ ಸಂಸ್ಥೆಯ (ಭಾ.ಕೃ.ಅ.ಸಂಸ್ಥೆ) ಭಾಗವಾಗಿರುವ ಭಾ.ಕೃ.ಅ.ಸಂ ಅಖಿಲ ಭಾರತ ಸಹ-ಸಂಘಟಿತ ಸಂಶೋಧನಾ ಯೋಜನೆ (ಕೊಯ್ಲೋತ್ತರ ಅಭಿಯಂತರು ಮತ್ತು ತಂತ್ರಜ್ಞಾನ ವಿಭಾಗ). ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಪೋಸ್ಟ್ ಹಾರ್ವೆಸ್ಟ್ ಇಂಜಿನೀಯರಿಂಗ್ ಅಂಡ್ ಟೆಕ್ನಾಲಜಿ (ಸಿ.ಐ.ಪಿ.ಹೆಚ್.ಇ.ಟಿ), ಲೂಧಿಯಾನಾ, ಪಂಜಾಬ್‌ನ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ 2019ರಲ್ಲಿ ನಡೆದ ಭಾ.ಕೃ.ಸಂ.ಮಂ- ಅಖಿಲ ಭಾರತ ಸಹ-ಸಂಘಟಿತ ಸಂಶೋಧನಾ ಯೋಜನೆ (ಕೊಯ್ಲೋತ್ತರ ಅಭಿಯಂತರು ಮತ್ತು ತಂತ್ರಜ್ಞಾನ ವಿಭಾಗ) ಯೋಜನೆಯ ಕಾರ್ಯಾಗಾರ/ವಾರ್ಷಿಕ ತಾಂತ್ರಿಕ ಸಭೆಯ ನಡವಳಿಯ ಪ್ರಕಾರ ವಿಶ್ವವಿದ್ಯಾಲಯವು AICRP ಯೋಜನೆಯ ಖಾಲಿ ಹುದ್ದೆಗಳನ್ನು ತುಂಬಲಾಗದಿದ್ದಲ್ಲಿ ಸದರಿ ಖಾಲಿ ಹುದ್ದೆಗಳನ್ನು ರದ್ದುಪಡಿಸಲಾಗುವುದಾಗಿ ಷರತ್ತನ್ನು ವಿಧಿಸಲಾಗಿತ್ತು. ಆದ್ದರಿಂದ ತಾತ್ಕಾಲಿಕವಾಗಿ ಸಮವ್ಯಾಪಕ (co-terminus) ಅಡಿಯಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ.
(ಊ)	ಈ ಯೋಜನೆಯಡಿ ನೇಮಕವಾದ contractual ಸಿಬ್ಬಂದಿಗಳಿಗೆ ಕೆ.ಸಿ.ಎಸ್.ಆರ್ ಹಾಗೂ ಕೆ.ಎಫ್.ಸಿ ನಿಯಮಗಳ ವಿರುದ್ಧವಾಗಿ ವಾರ್ಷಿಕ ವೇತನ ಬಡ್ತಿ, ಖಾಯಂ ನೌಕರರಂತೆ ವೇತನ ಶ್ರೇಣಿ ಹಾಗೂ ಕಾರ್ಮಿಕ ಕಾಯ್ದೆಯಂತೆ 179 ದಿನಗಳಿಗೆ ಕೆಲಸ ಮಿತಿಗೊಳಿಸದಿರುವವರ ವಿರುದ್ಧ ಯಾವ ಕ್ರಮ ತೆಗೆದು ಕೊಳ್ಳಲಾಗುವುದು?	ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯ ಮತ್ತು ಐಸಿಎಆರ್ ನಡುವೆ ಅನುಮೋದನೆಗೊಂಡಿರುವ ಒಡಂಬಡಿಕೆಯ ಪ್ರಕಾರ ಸಿಬ್ಬಂದಿಗಳಿಗೆ ವೇತನ ಹಾಗೂ ತತ್ಸಂಬಂಧ ಭತ್ಯೆಯನ್ನು ನೀಡಬೇಕಾಗಿ ಸ್ಪಷ್ಟವಾಗಿ ತಿಳಿಸಲಾಗಿದ್ದು ಅದರ ಪ್ರಕಾರವಾಗಿ ಪಾಲಿಸಿಕೊಂಡು ಬರಲಾಗುತ್ತಿರುವುದರಿಂದ ಹಾಗೂ ಒಡಂಬಡಿಕೆಯಲ್ಲಿ ಯಾವುದೇ ವರ್ಗದ ಸಿಬ್ಬಂದಿಯನ್ನು ಇಂತಿಷ್ಟು ದಿನಗಳಿಗೆ (179) ಮಾತ್ರ ಸೀಮಿತಗೊಳಿಸುವುದಕ್ಕೆ ಯಾವುದೇ ರೀತಿಯ ಷರತ್ತನ್ನು ವಿಧಿಸಲಾಗಿಲ್ಲ. ಈ ಯೋಜನೆಯು ಮುಕ್ತಾಯಗೊಂಡಲ್ಲಿ ಈ ಎಲ್ಲಾ ಸೌಲಭ್ಯಗಳು ಕೊನೆಗೊಳ್ಳುತ್ತವೆ ಹಾಗೂ ಇಲ್ಲಿ ಯಾವುದೇ ರೀತಿಯ ನಿಯಮಗಳ ವಿರುದ್ಧವಾಗಿ ಕಾರ್ಯಕ್ಕೆಗೊಂಡಿಲ್ಲದಿರುವುದು ಕಂಡು ಬಂದಿರುತ್ತದೆ.

ಸಂಖ್ಯೆ: ಪಸಂಮೀ 213 ಪಅಸೇ 2020

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು